**<u>ದಿನಾಂಕಃ 10.12.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಎಸ್,ವಿ., ಪ್ರತಿವಾದಿ ಪರ ವಕೀಲರಿಂದ</u>**

ಪ್ರತಿವಾದಿಯವರು ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಬೊಮ್ಮಯ್ಯನಿಗೆ ಒಟ್ಟು 3 ಜನ ಮಕ್ಕಳು ಎಂದರೆ ಸರಿ. ಮೊದಲನೇ ಮಗ ರಾಮಚಂದ್ರಪ್ಪ ಎಂದರೆ ಸರಿ. ಸದರಿ ರಾಮಚಂದ್ರಪ್ಪನಿಗೆ ನಿಂಗಮ್ಮ ಅಂದರೆ 4ನೇ ಪ್ರತಿವಾದಿ ಹೆಂಡತಿ ಎಂದರೆ ಸರಿ. ಸದರಿ ರಾಮಚಂದ್ರಪ್ಪನಿಗೆ ಪಾಪಣ್ಣ ಮತ್ತು ಶಿವಣ್ಣ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ರಾಮಚಂದ್ರಪ್ಪ ಇವರ ತಂದೆಯ ಹೆಸರು ಬೊಮ್ಮಯ್ಯ ಎಂದರೆ ಸರಿ.





ದಾವಾ ಆಸ್ತಿಯು ಬೊಮ್ಮಯ್ಯನಿಗೆ ದರಖಾಸ್ತಿನ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಬೊಮ್ಮಯ್ಯನಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರೆದು ಭಾಗದ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾಗವನ್ನು ಯಾರೊಂದಿಗೆ ಮಾಡಿಕೊಂಡಿದ್ದರು ಅಂತ ನನಗೆ ಗೊತ್ತಿಲ್ಲ.

ನನ್ನ ಅತ್ತೆಯ ಹೆಸರು ಸರೋಜಮ್ಮ. ನನ್ನ ಅತ್ತೆ 15 ವರ್ಷಗಳ ಕಾಲ ದೊಡ್ಡೇರಿ ಗ್ರಾಮದಲ್ಲಿ ಅವರ ಗಂಡನಾದ ಚನ್ನಪ್ಪರವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ಸರೋಜಮ್ಮ ದಾಂಡೇಲಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೋಗಿ ಬಂದು ಮಾಡುತ್ತಿರಬಹುದು ಎಂದು

ನುಡಿಯುತ್ತಾರೆ. ನನ್ನ ಪ್ರಕಾರ ನನ್ನ ಅತ್ತೆ ಚಳ್ಳಕೆರೆಯ ಒಂದು ಮನೆಯಲ್ಲಿ ವಾಸವಾಗಿದ್ದರು. ನನ್ನ ಅತ್ತೆ ಚಳ್ಳಕೆರೆಯಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಅತ್ತೆ ಎಂದಿಗೂ ಚಳ್ಳಕೆರೆ ಯಲ್ಲಿ ವಾಸವಾಗಿರಲಿಲ್ಲ ಹಾಗೂ ಚಳ್ಳಕೆರೆಯಲ್ಲಿ ಅವರು ವಾಸವಿದ್ದರು ಅಂತ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಬೊಮ್ಮಯ್ಯ ಇವರನ್ನು ನಾನು ನೋಡಿರುತ್ತೇನೆ. ನನ್ನ ಮದುವೆ ಚಳ್ಳಕೆರೆ ನಗರದ ರಾಮಚಂದ್ರಪ್ಪ ಇವರ ಮನೆಯ ಮುಂದೆ ನಡೆದಿರುತ್ತದೆ. ನನ್ನ ಮದುವೆ ರಾಮಚಂದ್ರಪ್ಪ ಇವರ ಮನೆಯ ಮುಂದೆ ನಡೆದಿರುತ್ತದೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪನಿಗೂ ಮತ್ತು ನನಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

ರಾಮಚಂದ್ರಪ್ಪನ ಮನೆ ಮೊದಲು ಎಲ್ಲಿ ಇತ್ತೋ ಈಗಲೂ ಅಲ್ಲಿಯೇ ಇರುತ್ತದೆ ಎಂದರೆ ಸರಿ. ನಾನು ವಾಸವಿರುವ ಮನೆಗೂ ಹಾಗೂ ರಾಮಚಂದ್ರಪ್ಪ ವಾಸಿಸುತ್ತಿರುವ ಮನೆಗೂ ಸುಮಾರು 1.5 ಕಿ.ಮೀ ದೂರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲರೂ ಒಂದೇ ಕುಟುಂಬದಲ್ಲಿದ್ದೆವು ಎಂದು ನುಡಿಯುತ್ತಾರೆ.

- 12 -

ಸಾಕ್ಷಿಯು ಪುನಃ ಮುಂದುವರೆದು ಈಗ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಸುಮಾರು 25 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಮಾರು 6 ವರ್ಷಗಳಿಂದ ಬಾಡಿಗೆ ಮನೆಯಲ್ಲಿದ್ದೇನೆ ಎಂದು ನುಡಿಯುತ್ತಾರೆ.

ನಾನು ಚಳ್ಳಕೆರೆಯಲ್ಲಿ ವಾಸಿಸುತ್ತಿದ್ದಾಗ ಸರೋಜಮ್ಮ ತನ್ನ ಮಗಳ ಮನೆಯಲ್ಲಿ ಅಂದರೆ ದಾಂಡೇಲಿಯಲ್ಲಿ ವಾಸಿಸುತ್ತಿದ್ದಳು ಎಂದರೆ ಸರಿಯಲ್ಲ. ಸರೋಜಮ್ಮನ ಗಂಡನ 2ನೇ ಹೆಂಡತಿ ಈಗಲೂ ಸಹ ದೊಡ್ಡೇರಿ ಗ್ರಾಮದಲ್ಲಿ ಇದ್ದಾಳೆ ಎಂದರೆ ಸರಿಯಲ್ಲ. ಸರೋಜಮ್ಮ ಸಾಯುವ ವರೆಗೆ ತನ್ನ ಗಂಡನ 2ನೇ ಹೆಂಡತಿಯೊಂದಿಗೆ ಅನ್ಯೋನ್ಯವಾಗಿ ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಮೃತ ಸರೋಜಮ್ಮ ತನ್ನ ಗಂಡನ 2ನೇ ಹೆಂಡತಿ ಮಕ್ಕಳನ್ನು ತನ್ನ ಮಕ್ಕಳಂತೆ ಸಾಕುತ್ತಿದ್ದಳು ಎಂದರೆ ಸರಿಯಲ್ಲ.

ನನ್ನ ಮೃತ ಗಂಡ ವೀರೇಶ್ ಸಹ ತನ್ನ ತಂದೆಯ 2 ನೇ ಹೆಂಡತಿಯ ಮಕ್ಕಳೊಂದಿಗೆ ಅನ್ಯೋನ್ಯವಾಗಿದ್ದನು ಎಂದರೆ ಸರಿಯಲ್ಲ. ನನ್ನ ಗಂಡ ವೀರೇಶ್ ತನ್ನ ತಂದೆಯ 2 ನೇ ಹೆಂಡತಿಯ ಮಕ್ಕಳೊಂದಿಗೆ ಅನ್ಯೋನ್ಯವಾಗಿ ಇದ್ದು ಅವರೊಂದಿಗೆಯೇ ಒಡನಾಟ ಇತ್ತು ಎಂದರೆ ನನಗೆ ಗೊತ್ತಿಲ್ಲ.

ನನ್ನ ಗಂಡ ವೀರೇಶ್ ಗೂ ಹಾಗೂ ರಾಮಚಂದ್ರಪ್ಪನ ಮಕ್ಕಳಿಗೂ ಯಾವುದೇ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ. ಅವರೊಂದಿಗೆ ನನ್ನ ಗಂಡನ ಸಂಬಂಧ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ.

ದಿಃ 04.12.2003 ರಂದು ಬೊಮ್ಮಯ್ಯ ತನ್ನೊಂದಿಗೆ ಕೆಂಚಮ್ಮ ಗಂಡ ಬೊಮ್ಮಯ್ಯ ಮತ್ತು ಓಬಣ್ಣ ತಂದೆ ಪೂಜಾರಿ ಓಬಯ್ಯನ ಇವರನ್ನು ರೆವಿನ್ಯೂ ದಾಖಲೆಗಳೊಂದಿಗೆ ತನ್ನ ಜೊತೆಗೆ ಉಪನೊಂದಣಾಧಿಕಾರಿಗಳವರ ಕಚೇರಿಗೆ ಕರೆದುಕೊಂಡು ಹೋದನು ಅಂತ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದು ಅದು ಸತ್ಯವಿರುತ್ತದೆ. ಆ ರೀತಿ ಕರೆದುಕೊಂಡು ಹೋಗಿರುವುದನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಆ ದಿನ ಉಪನೊಂದಣಾಧಿಕಾರಿಗಳವರ ಕಚೇರಿಗೆ ಹೋಗುವ ವಿಷಯವನ್ನು ನನಗೆ ಬೊಮ್ಮಯ್ಯ ತಿಳಿಸಿದ್ದನು.





ಕೆಂಚಮ್ಮ ಗಂಡ ಬೊಮ್ಮಯ್ಯ ಮತ್ತು ಓಬಣ್ಣ ತಂದೆ ಪೂಜಾರಿ ಓಬಯ್ಯ ಇವರು ಈಗಲೂ ಜೀವಂತ ಇರುತ್ತಾರೆ. ವಿಲ್ ಪತ್ರವನ್ನು ಯಾರ ಬಳಿ ಬರೆಸಿದ್ದರು ಅಂತ ನನಗೆ ಗೊತ್ತು. ವಿಲ್ಲನ್ನು ಬರೆದವರು ಗುರುಸಿದ್ದಪ್ಪ ಅಂತ ಇರಬಹುದು.

ನಿಪಿಃ 7 ವಿಲ್ ಪತ್ರದ ಕುರಿತು ನನಗೆ 2003 ರಲ್ಲಿಯೇ ಸಂಪೂರ್ಣವಾದ ಮಾಹಿತಿ ಇತ್ತು ಎಂದರೆ ಸರಿ. ದಿಃ 29.09.2011 ರಂದು ಬೊಮ್ಮಯ್ಯ ಮೃತನಾಗಿರುತ್ತಾನೆ ಎಂದರೆ ಸರಿ. ನನ್ನ ಗಂಡ ವೀರೇಶ್ ದಿಃ 03.03.2013 ರಂದು ತೀರಿಕೊಂಡಿದ್ದಾನೆ ಎಂದರೆ ಸರಿ. ಬೊಮ್ಮಯ್ಯ ಮೃತನಾದ 2 ವರ್ಷಗಳ ನಂತರ ನನ್ನ ಗಂಡ ಮೃತನಾಗಿರುತ್ತಾನೆ ಎಂದರೆ ಸರಿ. ನನ್ನ ಗಂಡನ ಆರೋಗ್ಯ ಸಾಯುವ ಪೂರ್ವದಲ್ಲಿ ಚೆನ್ನಾಗಿತ್ತು ಎಂದರೆ ಸರಿ. 2003 ರಲ್ಲಿ ಮಾಡಿರುವ ವಿಲ್ ಪತ್ರದ ಕುರಿತು ನನ್ನ

ಗಂಡನಿಗೂ ಸಹ 2003 ರಲ್ಲಿಯೇ ಗೊತ್ತಿತ್ತು ಎಂದರೆ ಸರಿ.

ನನ್ನ ಗಂಡ ಜೀವಂತ ಇದ್ದಾಗ ವಿಲ್ ಪತ್ರದ ಪ್ರಕಾರ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಪಿಃ 7 ನ್ನು ನಾನು, ಕೆಂಚಮ್ಮ, ಓಬಣ್ಣ ಮತ್ತು ಗುರುಸಿದ್ದಪ್ಪ ಇವರು ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಗಂಡ ತನ್ನ ಪೂರ್ತಿ ಜೀವನದಲ್ಲಿ ನೀತಿ ನಿಯಮದ ಅನುಗುಣವಾಗಿ ಜೀವಿಸುತ್ತಿದ್ದರು ಎಂದರೆ ಸರಿ. ಆದ್ದರಿಂದ ಅವರು ತಮ್ಮ ಜೀವಿತ ಕಾಲದಲ್ಲಿ ವಿಲ್ ಪ್ರಕಾರ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡನಿಗೆ ಸಾಯುವ ತನಕ ನಿಪಿಃ 7 ವಿಲ್ ಪತ್ರದ ಕುರಿತು ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

ಬೊಮ್ಮಯ್ಯನಿಗೆ 2011 ನೇ ಇಸವಿಗೆ ಅವರಿಗೆ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಗ್ಯವಾಗಿದ್ದರು ಎಂದು ನುಡಿಯುತ್ತಾರೆ. ಬೊಮ್ಮಯ್ಯ ಸಾಯುವ 30 ವರ್ಷ ಪೂರ್ವದಲ್ಲಿಯೇ ಅವರಿಗೆ ಪಾರ್ಶ್ವವಾಯು ತಗುಲಿತ್ತು ಎಂದರೆ ಸರಿಯಲ್ಲ. ಅವರಿಗೆ ಪಾರ್ಶ್ವವಾಯು ಆಗಿದ್ದರಿಂದ ಅವರ ಮಕ್ಕಳು



ನಾಟೀ ಔಷಧಿ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನಮ್ಮ ಮನೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ನಮ್ಮ ಮನೆಯಲ್ಲಿ ಅಂದರೆ ತೋಟದ ಮನೆಯಲ್ಲಿ ಎಂದು ನುಡಿಯುತ್ತಾರೆ. ನಾನು ಎಂದಿಗೂ ತೋಟದ ಮನೆಯಲ್ಲಿ ಇರಲಿಲ್ಲ ಕಾರಣ ಅವರಿಗೂ ನನಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಸರೋಜಮ್ಮನ ಸೊಸೆ ಎಂದರೆ ಸರಿ. ಸುಮ ಎಂಬುವವರು ನಿಂಗಮ್ಮನ ಸೊಸೆ ಎಂದರೆ ಸರಿ. ಸದರಿ ಸುಮಾ 5 ನೇ ಪ್ರತಿವಾದಿ ಪಾಪಣ್ಣ ಇವರ ಹೆಂಡತಿ ಎಂದರೆ ಸರಿ. ನಿಪಿಃ 7 ರಲ್ಲಿ ಇರುವ ಸಹಿಯಂತೆ ಬೊಮ್ಮಯ್ಯನ ಸಹಿ ಮಾಡುತ್ತಿದ್ದ ಅಂತ ತೋರಿಸಲು ನಾನು ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು ಅದೇ ರೀತಿ ಸಹಿ ಮಾಡುತ್ತಿದ್ದರು ಎಂದು

ನುಡಿಯುತ್ತಾರೆ.

ನಿಪಿಃ 7 ರಲ್ಲಿ ನಮೂದು ಇರುವ ಸಹಿಯು ಬೊಮ್ಮಯ್ಯನದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ 7 ನ್ನು ನಾನು ಹಾಗೂ ಸಾಕ್ಷಿದಾರರು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಪೂಜಾರಿ ಓಬಯ್ಯನ ಮಗ ಓಬಣ್ಣ ನನಗೆ ಸಂಬಂಧಿಕನಾಗಿರುವುದಿಲ್ಲ. ನಾನು ಅವರೊಂದಿಗೆ ವಿಶ್ವಾಸದಿಂದ ಇದ್ದೇನೆ ಎಂದರೆ ಸಾಕ್ಷಿಯು ಅವರ ತಾತ ಗೊತ್ತು ಎಂದು ನುಡಿಯುತ್ತಾರೆ. ನಾನು ಅವರೊಂದಿಗೆ ವಿಶ್ವಾಸದಿಂದ ಇರುವುದನ್ನು ಸದುಪಯೋಗಪಡಿಸಿಕೊಂಡು ನಿಪಿಃ 7 ನ್ನು ನನಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿಃ 7 ನನ್ನ ಬಳಿಯೇ ಇತ್ತು. ಬೊಮ್ಮಯ್ಯ ಮೃತನಾದ ನಂತರ ನಿಪಿಃ 7 ವಿಲ್ ಪತ್ರವನ್ನು ನಾನು ಮತ್ತು ನನ್ನ ಗಂಡ ಜೊತೆಯಲ್ಲಿಯೇ ಇಟ್ಟುಕೊಂಡಿದ್ದೆವು ಎಂದರೆ ಸರಿ. ನಿಪಿಃ 7 ನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಅಂತ ನನಗೆ ಚೆನ್ನಾಗಿ ಗೊತ್ತಿದ್ದರಿಂದ ಅದರಂತೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ 53/2016**
**ಪಿ.ಡಬ್ಲ್ಯೂಃ** -01

ಬೊಮ್ಮಯ್ಯ ರವರು ತನ್ನ ಜೀವಿತ ಅವಧಿಯಲ್ಲಿಯೇ ದಾವಾ ಸ್ವತ್ತನ್ನು ತನ್ನ ಮೂರು ಜನ ಮಕ್ಕಳಿಗೆ ಮೌಖಿಕವಾಗಿ ಸಮವಾಗಿ ಭಾಗ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ವೀರೇಶ್ ಇವರನ್ನು ಸೇರಿಸಿ 4 ಭಾಗ ಮಾಡಿದ್ದರು ಎಂದು ನುಡಿಯುತ್ತಾರೆ.

ಬೊಮ್ಮಯ್ಯನವರು ತನ್ನ ಜೀವಿತ ಕಾಲದಲ್ಲಿ ಮೌಖಿಕವಾಗಿ ಮಾಡಿಕೊಟ್ಟಂತಹ ಪಾಲು ವಿಭಾಗದಂತೆಯೇ ಓ.ಎಸ್. ನಂ. 211/2015 ರಂತೆ ಇದೇ ನ್ಯಾಯಾಲಯದಲ್ಲಿ ಪಾಲು ವಿಭಾಗ ಕೇಳಿ ದಾವೆಯನ್ನು ಸಲ್ಲಿಸಿ ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**( ನ್ಯಾಯಾಲಯದ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯುದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.